/

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 858 |
| ಸದಸ್ಯರ ಹೆಸರು | ಶ್ರೀ ಪಿ.ಆರ್ ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 11.03.2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕೃಷಿಯನ್ನು ಅವಲಂಬಿಸಿರುವ ರೈತರ ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ; | ಕೃಷಿಯನ್ನು ಅವಲಂಬಿಸಿರುವ ರೈತರ ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರ ರೂಪಿಸಿರುವ ಯೋಜನೆಗಳು ಈ ಕೆಳಗಿನಂತಿವೆ:<br><br>1. ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ<br>2. ಕೃಷಿ ಭಾಗ್ಯ<br>3. ಇತರೆ ಕೃಷಿ ಯೋಜನೆಗಳು<br>4. ಬೀಜ ಕ್ಷೇತ್ರಗಳು<br>5. ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು<br>6. ಸಾವಯವ ಕೃಷಿ<br>7. ಕೃಷಿ ವಿಸ್ತರಣೆ ಮತ್ತು ತರಬೇತಿ<br>8. ಕೃಷಿ ಮಹಿಳೆ ಮತ್ತು ಯುವ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕ್ರಮ<br>9. ಕೃಷಿ ಮೂಲಭೂತ ಸೌಕರ್ಯಗಳು<br>10. ರಾಷ್ಟ್ರೀಯ ಆಹಾರ ಸುರಕ್ಷತಾ ಮಿಷನ್<br>11. ಎನ್.ಎಮ್.ಎಸ್.ಎ-ಮುಖ್ಯಮಂತ್ರಿಯವರ ಸೂಕ್ಷ್ಮ ನೀರಾವರಿ ಯೋಜನೆ<br>12. ಎನ್.ಎಮ್.ಎಸ್.ಎ- ಇತರೆ ಘಟಕಗಳು<br>13. ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆ ಬೆಳೆ ಅಭಿಯಾನ<br>14. ರಾಷ್ಟ್ರೀಯ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನ ಅಭಿಯಾನ<br>15. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ<br>16. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ<br>17. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ<br>18. ಕೃಷಿ ಆಯುಕ್ತಾಲಯ<br>19. ಭೂಸಾರದ ಸಮೀಕ್ಷೆ ಮತ್ತು ಪರೀಕ್ಷೆ<br><br>**<u>ಜಲಾನಯನ ಅಭಿವೃದ್ಧಿ ಇಲಾಖೆ:</u>**<br>ಜಲಾನಯನ ಅಭಿವೃದ್ಧಿ ಇಲಾಖಾ ವತಿಯಿಂದ ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ರೈತ ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪ್ರಸ್ತುತ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1) ಪ್ರಧಾನ ಮಂತ್ರಿಕೃಷಿ ಸಿಂಚಾಯಿ ಯೋಜನೆ- ಜಲಾನಯನ ಅಭಿವೃದ್ಧಿ |

| | | |
|---|---|---|
| | | 2) ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ- ಇತರೆ ಉಪಚಾರಗಳು<br>3) ಕರ್ನಾಟಕ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ–II (ಸುಜಲಾ-III)<br>4) ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ<br>5) ಕೃಷಿ ಇಲಾಖೆಯ ಲೆಕ್ಕ ಶೀರ್ಷಿಕೆಯಿಂದ ಬಿಡುಗಡೆಯಾದ ಅನುದಾನದಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು<br>1. ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ<br>2. ರಾಷ್ಟ್ರೀಯಕೃಷಿ ವಿಕಾಸ ಯೋಜನೆ (RKVY)<br>ಅ) ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ (RPS)<br>ಆ) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPP-IAD)<br>ಇ) ರೈತ ಉತ್ಪಾದಕರ ಸಂಸ್ಥೆ (FPO) |
| ಆ. | ಸರ್ಕಾರದಿಂದ ಉಚಿತವಾಗಿ ನೀಡಲಾಗುವ ಬಿತ್ತನೆ ಬೀಜಗಳು ಹಾಗೂ ರಾಸಾಯನಿಕ ಗೊಬ್ಬರ ಮತ್ತು ಸಾವಯವ ಗೊಬ್ಬರಗಳಿಗೆ ಪ್ರಸಕ್ತ ಸಾಲಿನಲ್ಲಿ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ; (ಜಿಲ್ಲಾವಾರು / ತಾಲ್ಲೂಕುವಾರು ಮಾಹಿತಿ ನೀಡುವುದು) | ಬಿತ್ತನೆ ಬೀಜಗಳು ಹಾಗೂ ರಸಾಯನಿಕ ಗೊಬ್ಬರ ಮತ್ತು ಸಾವಯವ ಗೊಬ್ಬರಗಳನ್ನು ರೈತರಿಗೆ ಉಚಿತವಾಗಿ ನೀಡುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಆದಕಾರಣ ಅನುದಾನ ನಿಗದಿಪಡಿಸಿರುವುದಿಲ್ಲ. |
| ಇ. | ಕೆಲವು ಕಂಪನಿಗಳು ರೈತರಿಗೆ ಕಲಬೆರಕೆ ಬಿತ್ತನೆ ಬೀಜಗಳನ್ನು ಪೂರೈಸುತ್ತಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ರೈತರಿಗೆ ಗುಣಮಟ್ಟದ ಬೀಜ ವಿತರಿಸಲು ರಾಜ್ಯದಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಕಾಯ್ದೆಗಳು ಜಾರಿಯಲ್ಲಿದ್ದು, ಸದರಿ ಕಾಯ್ದೆಗಳ ಅನ್ವಯ ಬೀಜ ಪರಿವೀಕ್ಷಕರುಗಳು ಅಧಿಸೂಚಿತವಾಗಿದ್ದು, ಮಾರಾಟ ಮಳಿಗೆಗಳಿಂದ ಬೀಜ ಮಾದರಿಗಳನ್ನು ಸಂಗ್ರಹಿಸಿ ಬೀಜ ಪರೀಕ್ಷಾ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿರುತ್ತಾರೆ. ಬೀಜ ಮಾದರಿಯು ಕಳಪೆ ಗುಣಮಟ್ಟದೆಂದು ತಿಳಿದು ಬಂದಲ್ಲಿ ಅಂತಹ ಮಾರಾಟಗಾರರು ಮತ್ತು ಬೀಜೋತ್ಪಾದಕರ ಮೇಲೆ ಸದರಿ ಕಾಯ್ದೆಗಳ ಅನ್ವಯ ಕ್ರಮ ಜರುಗಿಸಲಾಗಿದೆ. ಮುಂದುವರೆದು, ಪರವಾನಗಿ ಇಲ್ಲದೆ ರೈತರಿಗೆ ಕಳಪೆ ಗುಣಮಟ್ಟದ ಬೀಜ ವಿತರಿಸುವ ಮಾರಾಟಗಾರರ ವಿರುದ್ಧ ಸಹ ಕಾಯ್ದೆಗಳ ಅನ್ವಯ ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ ರಾಜ್ಯದಲ್ಲಿ ಕಳಪೆ ಬೀಜದ ಹಾವಳಿಯನ್ನು ತಡೆಗಟ್ಟಲು ವಿಜಿಲೆನ್ಸ್ ಘಟಕ ಸಹ ಜಿಲ್ಲಾ ಮಟ್ಟದಲ್ಲಿ ಅಸ್ತಿತ್ವದಲ್ಲಿದೆ. |

| | | |
|---|---|---|
| ಈ | ಎರೆಹುಳು ಗೊಬ್ಬರಕ್ಕೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯ ದಲ್ಲಿ ಬೇರೆ ದರಗಳನ್ನು ನಿಗದಿ ಮಾಡಿ ಮಾರಾಟ ಮಾಡುತ್ತಿರುವ ಹಾಗೂ ತಾರತಮ್ಯ ಹೊಂದಿರುವ ಬಗ್ಗೆ ಮಾಹಿತಿ ನೀಡುವುದು; | ಕೃಷಿ ಇಲಾಖೆಯು ವಿವಿಧ ಕಾರ್ಯಕ್ರಮಗಳಲ್ಲಿ ಎರೆಹುಳು ಗೊಬ್ಬರ ಸರಬರಾಜು ಮಾಡಲು, ಇ-ಟೆಂಡರ್ ಮೂಲಕ ಬಿಡ್ ಗಳನ್ನು ಆಹ್ವಾನಿಸಿ ಸರಬರಾಜುದಾರರನ್ನು ಆಯ್ಕೆ ಮಾಡಿ, ಮಾರಾಟ ದರವನ್ನು ನಿಗದಿಪಡಿಸಲಾಗುತ್ತದೆ.<br><br>ಟೆಂಡರ್ ನಿಯಮದಡಿ ಅರ್ಹತೆ ಪಡೆದ ಎರೆಹುಳು ಗೊಬ್ಬರ ಸರಬರಾಜುದಾರರ ವಿವರ ಮತ್ತು ನಿಗಧಿಪಡಿಸಿದ ದರದ ವಿವರಗಳನ್ನು ಇಲಾಖೆಯ ಆನ್ ಲೈನ್ ವೆಬ್ ಸೈಟ್ ನಲ್ಲಿ ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.<br><br>ಎರೆಹುಳು ಗೊಬ್ಬರದ L1 ದರವು ರೂ.4.30/ಪ್ರತಿ ಕೆ.ಜಿ.ಗೆ ಇರುತ್ತವೆ, ಪ್ರತಿ ಪ್ಯಾಕ್ ಗಾತ್ರವು 50 ಕೆ.ಜಿ. ಇದ್ದು, ಒಟ್ಟು 50 ಕೆ.ಜಿ.ಗೆ ರೂ.215 ಇರುತ್ತದೆ. ಶೇ.50 ರ ರಿಯಾಯಿತಿ ದರದಲ್ಲಿ ಸಹಾಯಧನವು ರೂ.107.50 ಮತ್ತು ರೈತರ ವಂತಿಕೆ ರೂ.107.50, ಶೇ.75 ರ ರಿಯಾಯಿತಿ ದರದಲ್ಲಿ ಸಹಾಯಧನ ರೂ.161.50 ಮತ್ತು ರೈತರ ವಂತಿಕೆ ರೂ.53.50 ಇರುತ್ತದೆ.<br><br><u>ಕೃಷಿ ವಿಶ್ವವಿದ್ಯಾನಿಲಯದಲ್ಲಿ ದರಗಳನ್ನು ನಿಗದಿ ಮಾಡಿರುವ ವಿವರ:</u><br>**<u>ಬೆಂಗಳೂರು:</u>**<br><br>ಎರೆಹುಳು ಗೊಬ್ಬರ ತಯಾರಿಸಲು ಬೇಕಾಗುವ ಬಹುಮುಖ್ಯ ಕಚ್ಚಾ ವಸ್ತುಗಳಾದ ಸಗಣಿ, ಕೊಟ್ಟಿಗೆ ತ್ಯಾಜ್ಯ, ಹಸಿರೆಲೆ, ತರಗೆಲೆ ಮತ್ತು ಬೆಳೆಗಳ ಅವಶೇಷಗಳು ಅಗತ್ಯವಿದ್ದು, ಇವುಗಳನ್ನು ಶೇಖರಿಸಿ ಮತ್ತು ಕ್ರೋಢಿಕರಿಸಿದ ನಂತರ ಎರೆಹುಳು ಗೊಬ್ಬರ ತಯಾರಿಕೆಗೆ ಅನುವು ಮಾಡಿಕೊಳ್ಳಬೇಕು. ಈ ಪ್ರಕ್ರಿಯೆಯು ಪ್ರಾರಂಭದಿಂಧ ಅಂತಿಮವಾಗಿ ಎರೆಹುಳು ಗೊಬ್ಬರ ತಯಾರಾಗುವವರೆಗೆ ಸುಮಾರು 70 ರಿಂದ 90 ದಿನಗಳು ಅವಶ್ಯಕತೆ ಇರುತ್ತದೆ. ಕಚ್ಚಾ ವಸ್ತುಗಳ ಶೇಖರಣೆ ಮತ್ತು ಎರೆಹುಳು ತಯಾರಿಕೆಗೆ ಘಟಕ ನಿರ್ವಹಣೆಗಾಗಿ ಕಾರ್ಮಿಕರನ್ನು ಬಳಸುವುದರಿಂದ 1 ಕೆ.ಜಿ. ಎರೆಹುಳು ಗೊಬ್ಬರ ತಯಾರಿಸಲು ರೂ. 10 ರಿಂದ 12 ಖರ್ಚಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೃಷಿ ವಿಶ್ವವಿದ್ಯಾಲಯದ ದರ ನಿಗದಿಪಡಿಸುವ ಸಮಿತಿಯ ಸಲಹೆಯಂತೆ ಪ್ರತಿ ಕೆ.ಜಿ.ಗೆ 12/-ರಂತೆ ದರ ನಿಗಧಿಪಡಿಸಿ ಮಾರಾಟ ಮಾಡಲಾಗುತ್ತಿದೆ.<br><br>ಧಾರವಾಡ, ರಾಯಚೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಶಿವಮೊಗ್ಗ ಕೃಷಿ ತೋಟಗಾರಿಕೆ ವಿಶ್ವ ವಿದ್ಯಾಲಯಗಳಲ್ಲಿ ಎರೆಹುಳು ಗೊಬ್ಬರದ ಬೆಲೆಯನ್ನು ಪ್ರತಿ ಕಿ.ಗ್ರಾಂಗೆ ರೂ.5/- ರಂತೆ (ರೂ. 5000/-ಟನ್ ಗೆ) ಎರೆಹುಳು ಮಾರಾಟ ಮಾಡಲಾಗುತ್ತಿದೆ.<br><br>ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎರೆಹುಳು ಗೊಬ್ಬರಕ್ಕೆ ಒಂದು ದರ ನಿರ್ಧಾರ ಸಮಿತಿಯನ್ನು ರಚಿಸಲಾಗಿದ್ದು, ಆ ಸಮಿತಿಯಆದೇಶದ ಪ್ರಕಾರ ಹಾಗೂ ಕೃಷಿ ಅವಶೇಷಗಳ ಲಭ್ಯತೆ, ಅವುಗಳ ಗುಣಮಟ್ಟ, ಹಂಗಾಮು, ಕೂಲಿ ಆಳುಗಳ ಲಭ್ಯತೆ, ನೀರು ಇತರೆ ಪರಿಕರಗಳ ಲಭ್ಯತೆ ಆಧಾರದ ಮೇಲೆ ಮಾರಾಟ ದರವನ್ನು ಪರಿಗಣಿಸಲಾಗುತ್ತಿದೆ. |

**ತೋಟಗಾರಿಕಾ ಇಲಾಖೆ:**

ಎರೆಹುಳು ಗೊಬ್ಬರದ ಉತ್ಪಾದನಾ ವೆಚ್ಚವು ಈ ಕೆಳಗಿನ ಅಂಶಗಳ ಆಧಾರದ ಮೇಲೆ ವ್ಯತ್ಯಾಸವಾಗುತ್ತದೆ.

1. ಉತ್ಪಾದನೆಯ ಪ್ರಮಾಣ ಹೆಚ್ಚಾದಂತೆ ವೆಚ್ಚ ಕಡಿಮೆಯಾಗುತ್ತದೆ. ಉದಾ: ತೋಟಗಾರಿಕೆ ಇಲಾಖೆಯ ಜೈವಿಕ ಕೇಂದ್ರಗಳಲ್ಲಿ ಉತ್ಪಾದಿಸಲಾಗುತ್ತಿರುವ ಎರೆಹುಳು ಗೊಬ್ಬರದ ಪ್ರತಿ ಕೆ.ಜಿ.ಯ ಉತ್ಪಾದನಾ ವೆಚ್ಚ ಉತ್ಪಾದನಾ ಪ್ರಮಾಣಕ್ಕೆ ತಕ್ಕಂತೆ ಈ ಕೆಳಗಿನಂತೆ ವ್ಯತ್ಯಾಸವಾಗುತ್ತದೆ.

| ಪ್ರಮಾಣ (ಟನ್ ಗಳಲ್ಲಿ) | ವೆಚ್ಚ (ರೂಗಳಲ್ಲಿ) | ಪ್ರಮಾಣ (ಟನ್ ಗಳಲ್ಲಿ) | ವೆಚ್ಚ (ರೂಗಳಲ್ಲಿ) |
|---|---|---|---|
| 25 | 13.39 | 250 | 8.20 |
| 50 | 9.07 | 500 | 6.24 |
| 100 | 8.59 | 750 | 5.23 |
| 150 | 8.46 | 1000 | 4.57 |
| 200 | 8.33 | | |

ಸರಾಸರಿ ಮಾರಾಟ ದರವನ್ನು ರೂ.9/- ಪ್ರತಿ ಕೆ.ಜಿ.ಗೆ ನಿಗದಿ ಪಡಿಸಲಾಗಿದೆ.

2. ಎರೆಹುಳು ಗೊಬ್ಬರದ ಉತ್ಪಾದನೆಗೆ ಅಗತ್ಯವಾದ ಕೃಷಿ ತ್ಯಾಜ್ಯ ವರ್ಷವಿಡೀ ಉತ್ಪಾದನಾ ಘಟಕದ ವ್ಯಾಪ್ತಿಯಲ್ಲಿಯೇ ಸುಲಭವಾಗಿ ಲಭ್ಯವಾಗಿ ನಿರಂತರ ಉತ್ಪಾದನೆ ಇದ್ದಲ್ಲಿ, ಎರೆಹುಳು ಸಾಂದ್ರತೆ ಸದಾ ಲಭ್ಯವಾಗುವುದರಿಂದ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ.
3. ಎರೆಹುಳು ಗೊಬ್ಬರವನ್ನು ಉತ್ಪಾದಿಸಲು ನಿರ್ಮಿಸಲಾಗುವ ವಿವಿಧ ಬಗೆಯ ಮೂಲಭೂತ ಸೌಕರ್ಯಗಳು ಉದಾ: i) ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟ ತೊಟ್ಟಿಗಳು ಮತ್ತು ಶೀಟ್/ ಮೇಲ್ಛಾವಣಿ ii) ಕಲ್ಲಿನ ಚಪ್ಪಡಿಗಳಿಂದ ನಿರ್ಮಿಸಲ್ಪಟ್ಟ ತೊಟ್ಟಿಗಳು ಮತ್ತು ಮೇಲ್ಛಾವಣಿ iii) ಮಣ್ಣಿನಲ್ಲಿನ ಖಾಲಿ ಗುಂಡಿಗಳು ಮತ್ತು ಮರದ ಕಂಬ/ತೆಂಗಿನಗರಿ ಇತ್ಯಾದಿಗಳಿಂದ ಮಾಡಲ್ಪಟ್ಟ ಮೇಲ್ಛಾವಣಿ iv) ಹವಾಗುಣದಲ್ಲಿ ಹೆಚ್ಚು ಏರಿಳಿತಗಳಿಲ್ಲದ ಸಮಶೀತೋಷ್ಣ ಪ್ರದೇಶಗಳಲ್ಲಿ ಮರದ ಕೆಳಗೆ ತೆರೆದ ಜಮೀನಿನಲ್ಲಿ ಎರೆಹುಳು ಗೊಬ್ಬರ ಉತ್ಪಾದನೆ ಮಾಡಿದಲ್ಲಿ ಉತ್ಪಾದನಾ ವೆಚ್ಚ ಗಣನೀಯವಾಗಿ ಕಡಿಮೆಯಾಗುತ್ತದೆ.
4. ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಅವುಗಳ ಅಧೀನದ ಸಂಶೋದನಾ ಸಂಸ್ಥೆಗಳ ಆದ್ಯತೆ ಸಂಶೋದನೆ ಮತ್ತು ಪ್ರಾತ್ಯಕ್ಷಿಕೆವಾದ್ದರಿಂದ ಹಾಗೂ ಅಭಿವೃದ್ಧಿ ಇಲಾಖೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಎರೆಹುಳು ಗೊಬ್ಬರವನ್ನು ಉತ್ಪಾದಿಸಲು ಅವಕಾಶವಿರುವುದಿಲ್ಲವಾದ್ದರಿಂದ ವಾಣಿಜ್ಯಿಕ ಪ್ರಮಾಣದ ಉತ್ಪಾದನೆ ಸಾದ್ಯವಾಗುದಿಲ್ಲ. ಅಂತಹ ಸಂದರ್ಭಗಳಲ್ಲಿ ಉತ್ಪಾದನಾ ವೆಚ್ಚ ಮತ್ತು ಮಾರಾಟ ದರಗಳು ವ್ಯತ್ಯಾಸವಾಗುತ್ತವೆ.

ಕೆಲವೊಮ್ಮೆ ಅಭಿವೃದ್ಧಿ ಇಲಾಖೆಗಳಾದ ಕೃಷಿ ತೋಟಗಾರಿಕೆ ಇಲಾಖೆಗಳ ಮೂಲಕ ಜೈವಿಕ ಪರಿಕರಗಳ ವಿತರಣೆಗೆ ಸರ್ಕಾರವು ಸಹಾಯಧನ ನೀಡುವುದರಿಂದ, ಮಾರಾಟ ದರ ಅತಿ ಕಡಿಮೆ ಅಥವಾ ಉಚಿತವೂ ಆಗಬಹುದು.

| | | |
|---|---|---|
| ಉ. | ರೈತರಿಗೆ ರಿಯಾಯಿತಿ ದರದಲ್ಲಿ ಕೃಷಿ ಯಂತ್ರೋಪಕರಣ ಗಳನ್ನು ಪಡೆದುಕೊಳ್ಳಲು ಇರುವ ಮಾನದಂಡಗಳೇನು? | • ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ನಾಟಿ/ಬಿತ್ತನೆ ಉಪಕರಣಗಳು, ಟ್ರ್ಯಾಕ್ಟರ್/ ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು, ಕೃಷಿ ಸಂಸ್ಕರಣಾ ಘಟಕಗಳು ಹಾಗೂ ಡೀಸಲ್ ಪಂಪ್ ಸೆಟ್‌ಗಳನ್ನು ರಿಯಾಯಿತಿ ದರದಲ್ಲಿ ಕೃಷಿ ಇಲಾಖೆಯವತಿಯಿಂದ ಸಹಾಯಧನ ಯೋಜನೆಗಳಡಿ ಒದಗಿಸಲಾಗುತ್ತಿದೆ.<br>• ಕೃಷಿ ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ ಪ್ರತಿ ರೈತ ಫಲಾನುಭವಿಗಳಿಗೆ (Individual farmers) (ಟ್ರಾಕ್ಟರ್ ಹೊರತು ಪಡಿಸಿ), ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಟ ಮಿತಿ ರೂ. ಒಂದು ಲಕ್ಷದವರೆಗೆ ನೀಡಲಾಗುತ್ತಿದೆ. ರೈತರು ಒಂದಕ್ಕಿಂತ ಹೆಚ್ಚು ವಿವಿಧ ಉಪಕರಣಗಳಿಗೆ (ಪುನರಾವರ್ತನೆಯಾಗದಂತೆ) ಗರಿಷ್ಠ ರೂ. ಒಂದು ಲಕ್ಷದವರೆಗೆ ಸಹಾಯಧನವನ್ನು ಪಡೆಯಬಹುದಾಗಿರುತ್ತದೆ.<br>• ಸಣ್ಣ ಟ್ರಾಕ್ಟರ್ (<25 PTO HP) ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ರೂ.0.75 ಲಕ್ಷ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಂಗಡದ ರೈತರಿಗೆ ರೂ.3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.<br>• ಕೃಷಿ ಇಲಾಖೆಯಿಂದ ದರ ಕರಾರು ಸಂಸ್ಥೆಗಳ ಎಂಪ್ಯಾನಲ್‌ಗೊಂಡಿರುವ ಯಂತ್ರೋಪಕರಣಗಳನ್ನು ಮಾತ್ರ ಸಹಾಯಧನ ಯೋಜನೆಯಡಿ ವಿತರಿಸಲಾಗುವುದು.<br>• FRUITS (Farmers Registration and Unified Beneficiary Information System) Portal ತಂತ್ರಾಂಶದಲ್ಲಿ ನೊಂದಾಯಿತರಾದ ರೈತರು ಮಾತ್ರ ತಾವು ಇಚ್ಚಿಸುವ ಯಂತ್ರೋಪರಕರಣಗಳಿಗೆ ಕೆ-ಕಿಸಾನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.<br>• ರೈತರು ತಾವು ಇಚ್ಚಿಸುವ ಯಂತ್ರೋಪಕರಣಗಳಿಗೆ ಕೆ-ಕಿಸಾನ್ ಪೋರ್ಟಲ್‌ನ Citizen Centric login (kkisan.karnataka.gov.in) ಅಥವಾ ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು.<br>• ರೈತರು ಸಲ್ಲಿಸುವ ಅರ್ಜಿಗಳ ಜೇಷ್ಠತೆ ಆಧಾರದ ಮೇಲೆ, ರೈತರ ವರ್ಗದ ಆಧಾರದ ಮೇಲೆ ಮತ್ತು ಅನುದಾನ ಲಭ್ಯತೆ ಆಧಾರದ ಮೇಲೆ ಸಹಾಯಧನ ಯೋಜನೆಗಳಡಿ ರೈತರು ಪಡೆದ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುವುದು<br>• ರೈತರು ಯಾವುದಾದರು ಉಪಕರಣವನ್ನು ರಿಯಾಯಿತಿ ದರದಲ್ಲಿ ಕೃಷಿ ಇಲಾಖೆ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ಮೂಲಕ ಪಡೆದಿದ್ದಲ್ಲಿ, ಅದೇ ಉಪಕರಣವನ್ನು ಮುಂದಿನ ಮೂರು ಆರ್ಥಿಕ ವರ್ಷಗಳಲ್ಲಿ ರಿಯಾಯಿತಿ ದರಗಳಲ್ಲಿ ಪಡೆಯಲು ಅರ್ಹರಿರುವುದಿಲ್ಲ. |

**ಸಂಖ್ಯೆ: ಕೃಇ/ಕೃಇಕ/39/2020**

(ಬಿ.ಸಿ. ಪಾಟೀಲ್)
ಕೃಷಿ ಸಚಿವರು